# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 957
ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 24.07.2024.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದಲ್ಲಿನ ಪರಿಶಿಷ್ಟ ಪಂಗಡಕ್ಕೆ ಸೇರಿದ ಸರ್ವೆ ನಂ.110/2ನ್ನು ಸರ್ಕಾರದಿಂದ ಅನುಮತಿ ಪಡೆಯದೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು). | ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದಲ್ಲಿನ ಪರಿಶಿಷ್ಟ ಪಂಗಡಕ್ಕೆ ಸೇರಿದ ಸರ್ವೆ ನಂ.110/2ನ್ನು ಸರ್ಕಾರದಿಂದ ಅನುಮತಿ ಪಡೆಯದೆ ಪರಭಾರೆ ಮಾಡಿರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಸರ್ಕಾರದ ಅನುಮತಿ ಇಲ್ಲದೇ ಖರೀದಿಯಾಗಿರುವ ಸ.ನಂ.110/2ರ ಜಮೀನು ಖಾತೆ ಮಾಡುವಲ್ಲಿ ಸಹಕರಿಸಿರುವ ತಾಲ್ಲೂಕು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದೇ? (ವಿವರ ನೀಡುವುದು) | ಸರ್ಕಾರದ ಅನುಮತಿ ಇಲ್ಲದೇ ಖರೀದಿಯಾಗಿರುವ ಸ.ನಂ.110/2ರ ಜಮೀನು ಖಾತೆ ಮಾಡುವಲ್ಲಿ ಸಹಕರಿಸಿರುವ ತಾಲ್ಲೂಕು ಅಧಿಕಾರಿಗಳಾದ, ಶ್ರೀಮತಿ.ಆಂಜಿನಮ್ಮ.ಆರ್.ಎಸ್, ರಾಜಸ್ವ ನಿರೀಕ್ಷಕರು ಮತ್ತು ಶ್ರೀ.ಹೆಚ್.ಎಂ.ಮಂಜು, ಗ್ರಾಮ ಆಡಳಿತಾಧಿಕಾರಿ ರವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. |
| ಇ) | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನನ್ನು ಸರ್ಕಾರದ ಅನುಮತಿ ಇಲ್ಲದೆ ಇನ್ನೂ ಮುಂದೆ ಪರಭಾರೆ ಮಾಡಲು ಸಹಕರಿಸುವ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾಗಿ ಶಿಸ್ತು ಕ್ರಮ ಜರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನನ್ನು ಸರ್ಕಾರದ ಅನುಮತಿ ಇಲ್ಲದೆ ಇನ್ನೂ ಮುಂದೆ ಪರಭಾರೆ ಮಾಡಲು ಸಹಕರಿಸುವ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾಗಿ ಶಿಸ್ತು ಕ್ರಮ ಜರುಗಿಸಲು ಈಗಾಗಲೇ ಸಂಖ್ಯೆ: ಆರ್‌ಡಿ 37 ಎಲ್‌ಜಿಪಿ 2023ರಂತೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). |
| ಈ) | ಸರ್ಕಾರದ ಅನುಮತಿ ಇಲ್ಲದೆ ಪರಭಾರೆಯಾಗಿರುವ ಸ.ನಂ.110/2 ಜಮೀನಿನ ಖಾತೆ ಹಾಗೂ ಜಮೀನು ನೋಂದಣಿಯನ್ನು ರದ್ದುಪಡಿಸಲು ಕ್ರಮ ಜರುಗಿಸಲಾಗುವುದೇ ಹಾಗೂ ಈ ರೀತಿ ಪರಭಾರೆ ಮಾಡಿಕೊಂಡವರ ಮೇಲೆ ಸರ್ಕಾರ ಕ್ರಮ ವಹಿಸುವ ಮೂಲಕ ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ನಡೆಯದಂತೆ ಸೂಕ್ತ ಆದೇಶ ಹೊರಡಿಸಲಾಗುವುದೇ? (ವಿವರ ನೀಡುವುದು) | ಕಸಬಾ ಹೋಬಳಿ ಚೋಳಪ್ಪನಹಳ್ಳಿ ಗ್ರಾಮದ ಸ.ನಂ.110/2ರಲ್ಲಿ 0-22.08ಎ/ಗುಂಟೆ ವಿಸ್ತೀರ್ಣದ ಜಮೀನನ್ನು ಪಿ.ಟಿ.ಸಿ.ಎಲ್ ಕಾಯಿದೆಯ ಕಲಂ 4(2)ರಡಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯದೇ ಮಾರಾಟ ಅನುಮತಿಯನ್ನು ಪಡೆದಿರುವುದು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಲಭ್ಯ ದಾಖಲೆಗಳಂತೆ ಕಂಡುಬಂದಿರುವುದಿಲ್ಲ. ಆದ್ದರಿಂದ ಪಿ.ಟಿ.ಸಿ.ಎಲ್ ಕಾಯಿದೆಯಡಿ ಪ್ರಕರಣವನ್ನು ದಾಖಲಿಸಿಕೊಂಡು ಆದೇಶವನ್ನು ಹೊರಡಿಸಲು ಕೋರಿ ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರಡಿಯಲ್ಲಿ ಮಾರಾಟ ಮಾಡಲು ಸರ್ಕಾರದ ಪೂರ್ವಾನುಮತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳ |

| | | |
|---|---|---|
| | | ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 37 ಎಲ್‌ಜಿಪಿ 2023, ದಿನಾಂಕ:28.06.2024ರ ಸುತ್ತೋಲೆಯಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸಿನೊಂದಿಗೆ ಅರ್ಹ ಪ್ರಕರಣಗಳ ಪ್ರಸ್ತಾವನೆಯನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಇದರಲ್ಲಿ ಯಾವುದೇ ಲೋಪದೋಷ ಕಂಡುಬಂದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿ/ನೌಕರರನ್ನು ಜವಾಬ್ದಾರರನ್ನಾಗಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಹೊರಡಿಸಲಾಗಿರುತ್ತದೆ |

ಸಂಖ್ಯೆ: ಆರ್‌ಡಿ 70 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

## ಕರ್ನಾಟಕಸರ್ಕಾರ

ಸಂಖ್ಯೆ: ಆರ್‌ಡಿ 37 ಎಲ್.ಜಿ.ಪಿ. 2023

ಕರ್ನಾಟಕಸರ್ಕಾರಸಚಿವಾಲಯ,
ಬಹುಮಹಡಿಗಳಕಟ್ಟಡ,
ಬೆಂಗಳೂರು, ದಿನಾಂಕ: 28.06.2024

## ಸುತ್ತೋಲೆ

**ವಿಷಯ:** ಕರ್ನಾಟಕ ಪರಿಶಿಷ್ಟಜಾತಿ / ಪರಿಶಿಷ್ಟವರ್ಗಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ1978 ರಡಿಯಲ್ಲಿ ಮಾರಾಟ ಮಾಡಲು ಸರ್ಕಾರದ ಪೂರ್ವಾನುಮತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 41 ಎಲ್‌ಜಿಪಿ 2006, ದಿನಾಂಕ: 03.10.2006.
2. ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 47 ಎಲ್‌ಜಿಪಿ 2006, ದಿನಾಂಕ: 28.10.2006.
3. ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 31 ಎಲ್‌ಜಿಪಿ 2016, ದಿನಾಂಕ: 01.01.2020.
4. ಸರ್ಕಾರದ ಸುತ್ತೋಲೆ ಸಂಖ್ಯೆಆರ್‌ಡಿ 19 ಎಲ್‌ಜಿಪಿ 2021, ದಿನಾಂಕ: 07.08.2021
5. ಸರ್ಕಾರದ ಸುತ್ತೋಲೆ ಸಂಖ್ಯೆಆರ್‌ಡಿ 144 ಎಲ್‌ಜಿಎಕ್ಸ್ 2021, ದಿನಾಂಕ: 29.09.2021.
6. ಸರ್ಕಾರದ ಸುತ್ತೋಲೆ ಸಂಖ್ಯೆ ಆರ್.ಡಿ. 6 ಎಲ್.ಜಿ.ಪಿ. 2022, ದಿನಾಂಕ: 05.11.2022.
7. ಕರ್ನಾಟಕ ಪರಿಶಿಷ್ಟ ಜಾತಿ /ಪರಿಶಿಷ್ಟವರ್ಗಗಳ (ಕೆಲವು) ಜಮೀನುಗಳ ಪರಭಾರೆ ನಿಷೇಧ) ನಿಯಮಗಳು1978ನಿಯಮ 6.

****

ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಸರ್ಕಾರವು ಮಂಜೂರು ಮಾಡಿರುವ ಭೂಮಿಗಳನ್ನು ಸದರಿ ವರ್ಗದವರ ಮುಗ್ಧತೆ, ಬಡತನ ಮತ್ತು ಮೌಢ್ಯವನ್ನು ಬಲಿಷ್ಠ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು, ಪ್ರಸ್ತುತ ಮಾರುಕಟ್ಟೆ ದರಕ್ಕಿಂತ ಕಡಿಮೆ ಅಥವಾ ಯಾವುದೇ ದರರಹಿತವಾಗಿ ಮಾರಾಟ ಅಥವಾ ಅಡಮಾನ ಮಾಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಮಂಜೂರಾತಿಯ ಉದ್ದೇಶವನ್ನು ಪೂರ್ಣಗೊಳಿಸುವ ಸಲುವಾಗಿ, ಅಂತಹ ಭೂಮಿಯು ಸರ್ಕಾರದಿಂದ ಪೂರ್ವಾನುಮತಿ ಪಡೆಯದೇ ಪರಭಾರೆಯಾಗಿದ್ದಾಗ್ಯೂ ಸಹ, ಅದನ್ನು ಮೂಲ ಮಂಜೂರಾತಿದಾರನಿಗಾಗಲೀ ಅಥವಾ ಆತನ ಉತ್ತರಾಧಿಕಾರಿಗಳಿಗಾಗಲಿ ಪುನಸ್ಥಾಪಿಸಬೇಕು ಎಂಬ ಉದ್ದೇಶದಿಂದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಗೆ ಸರ್ಕಾರದಿಂದ ಮಂಜೂರಾದ ಭೂಮಿಯನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ, ಪರಭಾರೆ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಅಧಿನಿಯಮ, 1978 ನ್ನು ಜಾರಿಗೆ ತರಲಾಗಿದೆ.

ಸರ್ಕಾರದಿಂದ ಪರಿಶಿಷ್ಟ ಜಾತಿ / ಪಂಗಡದವರಿಗೆ ಮಂಜೂರಾದ ಜಮೀನುಗಳನ್ನು ಮಾರಾಟ ಮಾಡಲು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ

ನಿಷೇಧ) ಅಧಿನಿಯಮ, 1978 ರನ್ವಯ ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978ರ ಕಲಂ 4(2) ರಡಿ ಸರ್ಕಾರದ ಪೂರ್ವಾನುಮತಿ ಕೋರಿ ಪ್ರಸ್ತಾವನೆ ಸಲ್ಲಿಸುವಾಗ ಜಿಲ್ಲಾಧಿಕಾರಿಗಳು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಿದೆ.

1. ಪರಿಶಿಷ್ಟಜಾತಿ / ಪರಿಶಿಷ್ಟಪಂಗಡ ದವರಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನನ್ನು ಮಾರಾಟ ಮಾಡಲು ಮೂಲ ಮಂಜೂರಾತಿದಾರರು / ಮೂಲಮಂಜೂರಾತಿದಾರರ ಕಾನೂನುಬದ್ಧ ವಾರಸುದಾರರು ಸಂಬಂಧಪಟ್ಟ ತಹಶೀಲ್ದಾರರ ಮುಂದೆ ಖುದ್ದು ಹಾಜರಾಗಿ ನಿಯಮ 6 ರಲ್ಲಿ ತಿಳಿಸಿರುವಂತೆ ನಮೂನೆ III ರಲ್ಲಿ ಮಾಹಿತಿ ಭರ್ತಿ ಮಾಡಿ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಮಂಜೂರಿದಾರರ / ವಾರಸುದಾರರ ಜಾತಿ ಪ್ರಮಾಣಪತ್ರ ಹಾಗೂ ವಂಶವೃಕ್ಷವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಹಾಜರುಪಡಿಸತಕ್ಕದ್ದು.
3. ಮಂಜೂರಿದಾರರು / ವಾರಸುದಾರರು ಜಮೀನು ಮಾರಾಟ ಮಾಡಲು ಖರೀದಿದಾರರೊಂದಿಗೆ ಮಾಡಿಕೊಂಡಿರುವ ಕರಾರುಪತ್ರವನ್ನು ಹಾಜರುಪಡಿಸತಕ್ಕದ್ದು.
4. ಮಂಜೂರಿದಾರರು / ವಾರಸುದಾರರು ಮಾರಾಟ ಮಾಡಲು ಉದ್ದೇಶಿಸಿರುವ ಜಮೀನಿಗೆ ಬದಲಿ ಜಮೀನು ಖರೀದಿಸಲು ಮಾಡಿಕೊಂಡಿರುವ ನೋಂದಣಿ ಕರಾರುಪತ್ರವನ್ನು ಹಾಜರುಪಡಿಸತಕ್ಕದ್ದು.
5. ಜಮೀನಿನ ಮಂಜೂರಾತಿ ಮಾಡಿರುವ ಬಗ್ಗೆ ಮೂಲದಾಖಲಾತಿಗಳು ಲಭ್ಯವಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಮೂಲ ಸಾಗುವಳಿ ಚೀಟಿ / ದರಖಾಸ್ತು ಗ್ರ್ಯಾಂಟ್ ರಿಜಿಸ್ಟರ್ / ವಹಿ ಹಾಗೂ ಅಧಿಕೃತಜ್ಞಾಪನವನ್ನು ತಹಶೀಲ್ದಾರರು ದೃಢೀಕರಿಸುವುದು.
6. ಸ್ಥಳ ತನಿಖಾ ವರದಿಯಲ್ಲಿ ಸುತ್ತ-ಮುತ್ತ ಜಮೀನು ಇತರರಿಗೆ ಮಂಜೂರಾಗಿರುವ ಬಗ್ಗೆ ಹಾಗೂ ಮಾರಾಟ ಮಾಡಲು ಕೋರಿರುವ ಜಮೀನಿನ ಲಕ್ಷಣ ಹಾಗೂ ಅರ್ಜಿದಾರರು ಜಮೀನಿನ ಸ್ವಾಧೀನತೆಯ ಬಗ್ಗೆ ಹಾಗೂ ಅನುಭವದಲ್ಲಿರುವ ಬಗ್ಗೆ ವಿವರಗಳನ್ನು ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಖುದ್ದಾಗಿ ದೃಢೀಕರಿಸತಕ್ಕದ್ದು.
7. ಉಲ್ಲೇಖಿತ (2)ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಪಿಟಿಸಿಎಲ್ ಕಾಯ್ದೆಯಡಿ ಜಮೀನು ಮಾರಾಟ ಮಾಡಲು ಸರ್ಕಾರದ ಅನುಮೋದನೆ ಕೋರುವಾಗ ಇತರೆ ಎಲ್ಲಾ ದಾಖಲೆಗಳ ಜೊತೆ ಕಡ್ಡಾಯವಾಗಿ ಆಕಾರ್‌ಬಂದ್ ಹಾಗೂ ಸಕ್ಷಮ ಪ್ರಾಧಿಕಾರವು ಜಮೀನನ್ನುಮಂಜೂರುಮಾಡಿದಆದೇಶದನ್ವಯಮಂಜೂರಾತಿಜಮೀನುಪೋಡಿ / ದುರಸ್ತಿ ಆಗಿರುವ ಬಗ್ಗೆ ದೃಢೀಕೃತ ಸರ್ವೆ ದಾಖಲೆಗಳನ್ನು ಪಡೆದು ಸಲ್ಲಿಸುವುದು. ಒಂದು ವೇಳೆ ಪೋಡಿಯಾಗದಿದ್ದಲ್ಲಿ, ಪೋಡಿ ದುರಸ್ತಿ ನಂತರ ಪ್ರಸ್ತಾವನೆ ಸಲ್ಲಿಸುವುದು.
8. ಮಾರಾಟ ಮಾಡಲು ಕೋರಿರುವ ಜಮೀನು ಪಿ.ಟಿ.ಸಿ.ಎಲ್. ಕಾಯ್ದೆಯ ಕಲಂ 5ರಂತೆ ಈಹಿಂದೆ ಪಿ.ಟಿ.ಸಿ.ಎಲ್ ಕಾಯ್ದೆಯಡಿ ಮೂಲಮಂಜೂರುದಾರರು ಅಥವಾ ಅವರ ಕಾನೂನುಬದ್ಧ ವಾರಸುದಾರರಿಗೆ ಮರುಸ್ಥಾಪಿಸಲಾಗಿದೆಯೇ ಎಂಬ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು. ಮರುಸ್ಥಾಪಿಸಿದ್ದಲ್ಲಿ ದಾಖಲೆಗಳನ್ನು ಒದಗಿಸುವುದು.
9. ಮಾರಾಟ ಮಾಡಲು ಉದ್ದೇಶಿಸಿರುವ ಜಮೀನಿನ ಮಂಜೂರು ದಿನಾಂಕದಿಂದ ಈ ತಹಲ್‌ವರೆಗೆ ಋಣಭಾರರಹಿತ್ಯ ಪ್ರಮಾಣಪತ್ರ ಸಲ್ಲಿಸತಕ್ಕದ್ದು.
10. ಮಂಜೂರಾತಿ ಜಮೀನು ಮಾರಾಟ ಪ್ರಕ್ರಿಯೆಗೆ ಸಂಬಂಧಿಸಿದಂತೆ ಖರೀದಿದಾರರು ಮತ್ತು ಮಾರಾಟಗಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ, ಖರೀದಿದಾರರು ಮಾರಾಟ/ಗಾರರಿಗೆ ಪ್ರಸ್ತುತ ಮಾರುಕಟ್ಟೆ ಬೆಲೆ ನೀಡುತ್ತಿದ್ದಾರೆಯೇ ಎಂಬ ಬಗ್ಗೆ ತಹಶೀಲ್ದಾರರು ಪರಿಶೀಲಿಸುವುದು ಮತ್ತು ಈ ಸಂದರ್ಭದಲ್ಲಿ ನೈಜ ಮಾರುಕಟ್ಟೆ ಬೆಲೆಯ ಬಗ್ಗೆ ಮಂಜೂರುದಾರರಿಗೆ / ಅರ್ಜಿದಾರರಿಗೆ / ವಾರಸುದಾರರಿಗೆ ತಹಶೀಲ್ದಾರರು ಮಾಹಿತಿ ನೀಡುವುದು ಹಾಗೂ ಈ ವಿಷಯವನ್ನು ತಹಶೀಲ್ದಾರರು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ದಾಖಲಿಸುವುದು.

11. ಉಲ್ಲೇಖಿತ (4) ರ ಸುತ್ತೋಲೆಯಲ್ಲಿ ಸೂಚಿಸಿದಂತೆ ಸರ್ಕಾರದಿಂದ ಪೂರ್ವಾನುಮತಿ ಪಡೆದ ನಂತರ ಖರೀದಿದಾರರು, ಜಮೀನು ಮಾರಾಟಗಾರರಿಗೆ ಪಾವತಿಸುವ ಮೊತ್ತವನ್ನು ಅಕೌಂಟ್ ಪೇಯಿ ಚೆಕ್ (Account Payee Cheque) ಅಥವಾ ಡಿಮ್ಯಾಂಡ್ ಡ್ರಾಫ್ಟ್ (Demand Draft) ಅಥವಾ NEFT/RTGS ಗಳ ಮೂಲಕವೇ ಪಾವತಿಸತಕ್ಕದ್ದು ಎಂದು ಷರತ್ತು ವಿಧಿಸುವುದು.
12. ಉಲ್ಲೇಖಿತ (5)ರ ಸುತ್ತೋಲೆಯಲ್ಲಿ ಸೂಚಿಸಿದಂತೆ ಪಿಟಿಸಿಎಲ್ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಜಮೀನುಗಳನ್ನು ಭೂಪರಿವರ್ತನೆ ಮಾಡುವ ಮೊದಲು ಸರ್ಕಾರದಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆದ ನಂತರವಷ್ಟೇ ನಿಯಮಾನುಸಾರ ಭೂಪರಿವರ್ತನೆ ಮಾಡಲು ಕ್ರಮ ವಹಿಸುವುದು.
13. ಮಂಜೂರಿದಾರರು / ವಾರಸ್ಸುದಾರರು ಮಂಜೂರಾತಿ ಜಮೀನನ್ನು ಮಾರಾಟ ಮಾಡಲು ಸರ್ಕಾರವು ಪೂರ್ವಾನುಮತಿ ನೀಡಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಬದಲಿ ಜಮೀನನ್ನು ಖರೀದಿಸಿರುವ ಶುದ್ಧ ಕ್ರಯಪತ್ರವನ್ನು ಜಿಲ್ಲಾಧಿಕಾರಿಯವರಿಗೆ ನೀಡತಕ್ಕದ್ದು.
14. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ನಿಖರವಾದ ಮಾಹಿತಿಯನ್ನು ಭರ್ತಿಮಾಡಿ ಕಡ್ಡಾಯವಾಗಿ ದೃಢೀಕರಿಸತಕ್ಕದ್ದು. ಅಲ್ಲದೇ E-office ನಲ್ಲಿ ಪಿಟಿಸಿಎಲ್ ಪ್ರಸ್ತಾವನೆಗಳನ್ನು through Revenue Commissioner ಸರ್ಕಾರಕ್ಕೆ ಸಲ್ಲಿಸುವಾಗ ಮಂಜೂರಾತಿ ದಾಖಲೆ, ಪೋಡಿ ದಾಖಲೆ, ಇನ್ನಿತರೇ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ Hyper Link ಮಾಡತಕ್ಕದ್ದು.
15. ಮೇಲ್ಕಂಡ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸಿ ನಿಯಮಾನುಸಾರ ಪರಿಶೀಲಿಸಿ ಮಂಜೂರಿದಾರರು /ವಾರಸುದಾರರಿಂದ ತಹಶೀಲ್ದಾರರು ಅರ್ಜಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ ಪ್ರಸ್ತಾವನೆಯನ್ನು ಉಪವಿಭಾಗಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ಉಪವಿಭಾಗಾಧಿಕಾರಿಗಳು ತಹಶೀಲ್ದಾರರಿಂದ ಪ್ರಸ್ತಾವನೆ ಸ್ವೀಕರಿಸಿದ 15 ದಿನಗಳೊಳಗೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು ಹಾಗೂ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಯವರಿಂದ ಪ್ರಸ್ತಾವನೆ ಸ್ವೀಕರಿಸಿದ 30 ದಿನಗಳೊಳಗೆ ಪ್ರಸ್ತಾವನೆಯನ್ನು ಅವಗಾಹನೆಗೆ ಸಲ್ಲಿಸದೇ, ತಮ್ಮ ಸ್ಪಷ್ಟ ಅಭಿಪ್ರಾಯ /ಶಿಫಾರಸ್ಸಿನೊಂದಿಗೆ ಅರ್ಹ ಪ್ರಕರಣಗಳ ಪ್ರಸ್ತಾವನೆಯನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಇದರಲ್ಲಿ ಯಾವುದೇ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿ / ನೌಕರರನ್ನು ಜವಾಬ್ದಾರರನ್ನಾಗಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

**ಇವರಿಗೆ,**

1. ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿಕಟ್ಟಡ, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಉಪವಿಭಾಗಾಧಿಕಾರಿಗಳು (ಜಿಲ್ಲಾಧಿಕಾರಿಗಳ ಮುಖಾಂತರ)
5. ಎಲ್ಲಾ ತಹಶೀಲ್ದಾರರುಗಳು (ಜಿಲ್ಲಾಧಿಕಾರಿಗಳ ಮುಖಾಂತರ)
6. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾಕಡತ.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ, ಆಪ್ತಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಸುಧಾರಣೆ)
4. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು ಕಂದಾಯಇಲಾಖೆ (ಸಮನ್ವಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಧೀನಕಾರ್ಯದರ್ಶಿ, ಭೂಮಂಜೂರಾತಿ-1 ಹಾಗೂ ಭೂ ಮಂಜೂರಾತಿ-3/ ಪೀಠಾಧಿಕಾರಿಗಳು, ಭೂಮಂಜೂರಾತಿ-2, ಬಹುಮಹಡಿಗಳ ಕಟ್ಟಡ, ಬೆಂಗಳೂರು.

****

## ಚೆಕ್‌ಲಿಸ್ಟ್

| ಕ್ರ.ಸಂ. | ವಿವರಗಳು/ ದಾಖಲಾತಿಗಳು | | ಪುಟ |
|---|---|---|---|
| 1. | ಅರ್ಜಿದಾರರ ಹೆಸರು | | |
| 2. | ಮೂಲಮಂಜೂರಿದಾರರ ಹೆಸರು | | |
| 3. | ಅರ್ಜಿದಾರರು ಮತ್ತು ಮೂಲ ಮಂಜೂರಿದಾರರೊಂದಿಗಿನ ಸಂಬಂಧ (ವಂಶವೃಕ್ಷದ ಪ್ರತಿ ಒದಗಿಸುವುದು) | | |
| 4. | ಮಂಜೂರಾದ ಜಮೀನಿನ ವಿವರ<br>ಜಿಲ್ಲೆ /ತಾಲ್ಲೂಕು /ಹೋಬಳಿ / ಗ್ರಾಮ /ಸ.ನಂ /ವಿಸ್ತೀರ್ಣ. | | |
| 5. | ದರಖಾಸ್ತು ಮಂಜೂರಾತಿ ಸಂಬಂಧದ ಮೂಲ ದಾಖಲಾತಿಗಳು | | |
| | 1. ಅಧಿಕೃತ ಜ್ಞಾಪನ (ಧೃಢೀಕೃತ ನಕಲು) | | |
| | 2. ಸಾಗುವಳಿ ಚೀಟಿ (ಧೃಢೀಕೃತ ನಕಲು) | | |
| | 3. ದರಖಾಸ್ತು ಗ್ರ್ಯಾಂಟ್ ರಿಜಿಸ್ಟ್ಯಾರ್ (ಧೃಢೀಕೃತ ನಕಲು) | | |
| | 4. ಗೈರು ವಿಲೇ ಕಡತ ತಯಾರಿಸಲಾಗಿದೆಯೇ | | |
| 6. | ಪಿಟಿಸಿಎಲ್ ಕಾಯ್ದೆ ಕಲಂ 5 ರಂತೆ ಜಮೀನು ಮರುಸ್ಥಾಪಿಸಲಾಗಿದೆಯೇ? ಆಗಿದ್ದಲ್ಲಿ ಆದೇಶದ ಪ್ರತಿ | | |
| 7. | ಪಹಣಿ | | |
| | 1. ಮೂಲ ಮಂಜೂರುದಾರರಿಗೆ ಖಾತೆ ಆಗಿರುವ ಪಹಣಿ | | |
| | 2. ಪ್ರಸ್ತುತ ಪಹಣಿ | | |
| | 3. ಜಮೀನು ಆಧಾರ ಮಾಡಿದ್ದಲ್ಲಿ ಆಧಾರ ಬಿಡುಗಡೆ ಪತ್ರ | | |
| 8. | ಮ್ಯುಟೇಶನ್ ಪ್ರತಿ ( ಎಂ.ಆರ್) | | |
| | 1. ಮೂಲ ಮಂಜೂರುದಾರರಿಗೆ ಖಾತೆ ಆಗಿರುವ ಮ್ಯುಟೇಶನ್ ಪ್ರತಿ | | |
| | 2. ಪ್ರಸ್ತುತ ಖಾತೆದಾರರ ಮ್ಯುಟೇಶನ್ ಪ್ರತಿ | | |
| | 3. ಮೂಲ ಮಂಜೂರಿದಾರರಿಂದ ಹಾಲಿ ಖಾತೆದಾರರಿಗೆ ಆಗಿರುವ ವಹಿವಾಟು ಮ್ಯುಟೇಶನ್ ಪ್ರತಿಗಳು | | |
| 9. | ಜಮೀನು ಮಂಜೂರಾದ ದಿನಾಂಕದಿಂದ ತಹಲ್ ವರಗೆಎನ್ ಕಂಬರೆನ್ಸ್ (ಇ.ಸಿ) ಪ್ರಮಾಣ ಪತ್ರ (ಫಾರಂ. 15/16) | | |
| 10. | ಆಕಾರ್ ಬಂದ್ | | |
| | 1. ಮೂಲಸ.ನಂ. | | |
| | 2. ಹೊಸ ಸ.ನಂ. | | |
| 11. | ಪೋಡಿ ದುರಸ್ತಿ ಟಿಪ್ಪಣಿ ಮತ್ತು ಕರ್ದ ಪ್ರತಿ (ಧೃಢೀಕೃತ ಪ್ರತಿ ಲಗತ್ತಿಸುವುದು) | | |

| | | | |
|---|---|---|---|
| 12. | ಮಂಜೂರಾತಿ ಜಮೀನಿನ ಮಾರಾಟಕ್ಕೆ ಕಾರಣ | | |
| 13. | ಮಂಜೂರಾತಿ ಜಮೀನನ್ನು ಮಾರಾಟ ಮಾಡಲು ಮಾಡಿಕೊಂಡಿರುವ ನೋಂದಾಯಿತ ಕರಾರು ಪತ್ರ | | |
| 14. | ಮಾರಾಟ ಮಾಡುತ್ತಿರುವ ಜಮೀನಿನ ಬದಲಿ ಖರೀದಿಸುತ್ತಿರುವ ಜಮೀನಿನ ವಿವರಗಳು | | |
| | ಜಿಲ್ಲೆ/ತಾಲ್ಲೂಕು/ಹೋಬಳಿ/ಗ್ರಾಮ/ಸರ್ವೆನಂ/ವಿಸ್ತೀರ್ಣ | | |
| | ಕರಾರುಪತ್ರ / ಶುದ್ಧಕ್ರಯಪತ್ರ ಸಂಖ್ಯೆಮತ್ತುದಿನಾಂಕ | | |
| 15 | (a) ತಹಶೀಲ್ದಾರರ ಶಿಫಾರಸ್ಸು ಹಾಗೂ ಪತ್ರಸಂಖ್ಯೆ<br>(b) ಉಪವಿಭಾಗಾಧಿಕಾರಿಗಳ ಶಿಫಾರಸ್ಸು ಹಾಗೂ ಪತ್ರಸಂಖ್ಯೆ<br>(c) ಜಿಲ್ಲಾಧಿಕಾರಿಗಳ ಶಿಫಾರಸ್ಸು ಹಾಗೂ ಪತ್ರಸಂಖ್ಯೆ | | |
| 16 | ಷರಾ | | |
| | | | |

ತಹಶೀಲ್ದಾರ್ ಉಪವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿ